ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

**ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03**

ಸಂಖ್ಯೆ:ಕೆ2/ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ.ಕ್ಯಾಟ್ರಿಡ್ಜ್.ಖರೀದಿ/12/2022-23 ದಿನಾಂಕ: 14-07-2023.

## ದರಪಟ್ಟಿ ಆಹ್ವಾನ ಪತ್ರ

**ವಿಷಯ:** ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಯ ಪ್ರಿಂಟರ್‌ಗೆ ಅಗತ್ಯವಿರುವ TONER CARTRIDGE ಒಂದು ವರ್ಷದ ಅವಧಿಗೆ ಸರಬರಾಜು ಮಾಡಲು ದರಪಟ್ಟಿ ಆಹ್ವಾನಿಸಿರುವ ಬಗ್ಗೆ.

******

ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಯ ಮುದ್ರಣ ಕಾರ್ಯಗಳಿಗೆ ಬಳಸುವ ಈ ಕೆಳಕಂಡ ಪ್ರಿಂಟರ್‌ಗೆ ಅಗತ್ಯವಿರುವ ಅಧಿಕೃತ ಸಂಸ್ಥೆಯಿಂದ ತಯಾರಿಸಿದ ಉತ್ತಮ ಗುಣಮಟ್ಟದ ಈ ಕೆಳಕಂಡ TONER CARTRIDGE ಸರಬರಾಜು ಮಾಡಲು ಒಂದು ವರ್ಷದ ಅವಧಿಗೆ ಅರ್ಹ ಹಾಗೂ ಆಸಕ್ತ ಸಂಸ್ಥೆಗಳಿಂದ ದರಪಟ್ಟಿ ಆಹ್ವಾನಿಸಲಾಗಿದೆ. ದರಪಟ್ಟಿಯನ್ನು ಸಲ್ಲಿಸಲು ಇಚ್ಛಿಸುವ ಅಧಿಕೃತ ಸಂಸ್ಥೆಗಳು ದರಪಟ್ಟಿಯ ಷರತ್ತುಗಳಿಗೆ ಒಳಪಟ್ಟು ತಮ್ಮ ದರಪಟ್ಟಿಯನ್ನು ಸಲ್ಲಿಸಲು ಕೋರಿದೆ.

| ಕ್ರ.ಸಂ | ಖರೀದಿಸಬೇಕಾದ ಸಾಮಗ್ರಿ ವಿವರ | ಒದಗಿಸಬೇಕಾದ ಪ್ರಮಾಣ | ದರ (unit price) (ಎಲ್ಲಾ ತೆರಿಗೆಗಳು ಸೇರಿ) ರೂ.ಗಳಲ್ಲಿ |
|---|---|---|---|
| 1 | Toshiba e studio 3028A | ಒಂದು ವರ್ಷದ ಅವಧಿಯಲ್ಲಿ ಅವಶ್ಯಕತೆಗೆ ಅನುಗುಣವಾಗಿ ಸರಬರಾಜು ಆದೇಶ ನೀಡಲಾಗುವುದು. | |
| 2 | Epson Work\| Force Pro WF-C5790 **(INK SUPPLY UNIT BK,Y,M,C )** | | |
| 3 | HP pro M227DW | | |
| 4 | HP PRO M227FDW | | |
| 5 | CANON MF4820 D | | |

**ಷರತ್ತುಗಳು :**

1. ಮೇಲಿನ ಪ್ರಿಂಟರ್‌ನ TONER CARTRIDGE ಗಳಿಗೆ ಒಟ್ಟಾರೆಯಾಗಿ ಅತಿ ಕಡಿಮೆ ದರ ನಮೂದಿಸುವ ಸಂಸ್ಥೆಯ ದರವನ್ನು ಮಾತ್ರ ಪರಿಗಣಿಸಲಾಗುವುದು ಮತ್ತು ಎಲ್ಲಾ ತೆರಿಗೆಗಳು ಸೇರಿದಂತೆ ದರಗಳನ್ನು ನಮೂದಿಸುವುದು.
2. ಸರಬರಾಜು ಮಾಡುವ ಸಾಮಗ್ರಿಗಳು OEM ಹೊಂದಿರುವ ಅಧಿಕೃತ ಸಂಸ್ಥೆಯದ್ದಾಗಿದ್ದು ಉತ್ತಮ ಗುಣಮಟ್ಟ ಹೊಂದಿರಬೇಕು.
3. ಕಳಪೆ ಗುಣಮಟ್ಟದ ಹಾಗೂ ರೀಫಿಲ್ಲಿಂಗ್ ಮಾಡಿದ TONER CARTRIDGE ಸರಬರಾಜಿಸಿದಲ್ಲಿ ಅಂತಹ CARTRIDGE ಈ ಕಛೇರಿಯಿಂದ ಮುಟ್ಟುಗೋಲು ಹಾಕಿಕೊಳ್ಳಲಾಗುವುದಲ್ಲದೇ ಹಾಗೂ ಇದಕ್ಕಾಗಿ ಯಾವುದೇ ಮೊತ್ತ ಪಾವತಿಸುವುದಿಲ್ಲ.
4. ಸಂಸ್ಥೆಯು ಟೋನರ್ ಸರಬರಾಜಿಸಿದ ನಂತರ ಆರು ತಿಂಗಳ ಅವಧಿಯೊಳಗೆ ಟೋನರ್‌ನಲ್ಲಿ ಯಾವುದಾದರೂ ದೋಷಗಳು ಕಂಡು ಬಂದಲ್ಲಿ ಬದಲಿ ಟೋನರ್ ಒದಗಿಸುವುದು.
5. ದರಪಟ್ಟಿಯಲ್ಲಿನ ಸಾಮಗ್ರಿಗಳಿಗೆ ಈ ಕಛೇರಿಯಿಂದ ಯಾವುದೇ ರೀತಿಯ ಮುಂಗಡ ಅಥವಾ ಸಾರಿಗೆ ವೆಚ್ಚ ಇತ್ಯಾದಿಗಳನ್ನು ಪಾವತಿಸುವುದಿಲ್ಲ.
6. ಸದರಿ ಸಾಮಗ್ರಿ ವೆಚ್ಚದ ಬಿಲ್ ಮೊತ್ತದಲ್ಲಿ ಅನ್ವಯಿಸುವ ತೆರಿಗೆಗಳನ್ನು ಕಟಾಯಿಸಿ, ನಿಯಮಾನುಸಾರ ಚೆಕ್ ಮೂಲಕ ಪಾವತಿಸಲಾಗುವುದು.

7. ಅತಿ ಕಡಿಮೆ ದರಗಳನ್ನು ನಮೂದಿಸಿ ಆಯ್ಕೆಯಾಗುವ ಸಂಸ್ಥೆಯು ಸಾಮಗ್ರಿಗಳ ಸರಬರಾಜಿಗೆ ನೀಡಲಾಗುವ ಕಾರ್ಯಾದೇಶದಲ್ಲಿ ಸೂಚಿಸುವ ದಿನಾಂಕದೊಳಗೆ ಸಾಮಗ್ರಿಗಳನ್ನು ಸರಬರಾಜು ಮಾಡಬೇಕು. ತಪ್ಪಿದಲ್ಲಿ ವಿಳಂಬದ ಅವಧಿಯ ದಿನವೊಂದಕ್ಕೆ ರೂ.500/- ರಂತೆ ದಂಡವನ್ನು ಬಿಲ್ಲಿನ ಮೊತ್ತದಲ್ಲಿ ಕಟಾಯಿಸಲಾಗುವುದು.

ಮೇಲ್ಕಂಡ ಷರತ್ತುಗಳನ್ವಯ ಪ್ರಿಂಟರ್ ಟೋನರ್ ಕಾಟ್ರಿಡ್ಜ್‌ಗಳ ಸರಬರಾಜಿಗಾಗಿ ಸಂಸ್ಥೆಯ ಕನಿಷ್ಠ ದರಗಳ ಪಟ್ಟಿಯನ್ನು ದಿನಾಂಕ: **24/07/2023**ರ ಒಳಗಾಗಿ ಕಾರ್ಯನಿರ್ವಾಹಕ **ನಿರ್ದೇಶಕರು, ಕೆ.ಎಸ್.ಕ್ಯು.ಎ.ಎಸಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ** ಮಂಡಳಿ, ಮಲ್ಲೇಶ್ವರಂ, ಬೆಂಗಳೂರು, ಇವರಿಗೆ ಅಂಚೆ ಮೂಲಕ ಅಥವಾ ಖುದ್ದಾಗಿ ಸಲ್ಲಿಸಲು ತಿಳಿಸಲಾಗಿದೆ ಹಾಗೂ ಲಕೋಟೆಯ ಮೇಲೆ "**Quotation for supply of Toner Cartridge for KSQAAC**" ಎಂದು ನಮೂದಿಸುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆ.ಎಸ್.ಕ್ಯು.ಎ.ಎ.ಸಿ ಕಛೇರಿಯಿಂದ ಪಡೆಯಬಹುದಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎಸಿ

14/7

ಪ್ರತಿಯನ್ನು

1. ಮಂಡಳಿಯ ಸೂಚನಾ ಫಲಕಕ್ಕೆ
2. ಕಛೇರಿ ಪ್ರತಿ